‘ಅದು ಹೇಗೆ ಅಷ್ಟು ಡೆಫನೆಟ್ಟಾಗಿ ಹೇಳ್ತೀಯ’ ಅಂತ ಕೇಳಿದ್ದಕ್ಕೆ, ‘ಅಯ್ಯೋ ನಂಗೆ ಗೊತ್ತಾಗಲ್ವ? ಚಿನ್ನ ಯಾವುದು, ನಕಲಿ ಯಾವುದು ಅಂತ?’ ಅಂದಳು. ಇಬ್ಬರ ನಡುವೆ ವಾದ–ವಿವಾದ, ಚರ್ಚೆಗಳಾದ ಮೇಲೆ, ‘ಯಾರಾದರೂ ಈ ಒಡವೆಗಳ ಹುಡುಕಾಟದಲ್ಲಿರುವವರು ಕಂಡುಬಂದರೆ, ಪರಿಶೀಲಿಸಿ ಒಡವೆ ಅವರಿಗೆ ಕೊಡಬಹುದೆಂದುದಕ್ಕೆ ಒಪ್ಪಿಕೊಂಡಳು. ಅಲ್ಲಿಯವರೆಗೆ ತಾನದನ್ನು ಉಪಯೋಗಿಸುತ್ತೇನೆಂತಲೂ ಅಂದಿದ್ದಳು. ಯಾರೂ ಯಾವ ಪತ್ರಿಕೆಯಲ್ಲೂ ಪ್ರಕಟಣೆ ಕೊಡಲಿಲ್ಲ, ಹಾಗಾಗಿ ಒಡವೆ ಅವಳಲ್ಲೇ ಉಳಿಯಿತು. ಒಂದೆರೆಡು ವರ್ಷಗಳಾದ ಮೇಲೆ ಒಂದು ದಿನ ಯಾವುದೋ ಮದುವೆಗೆಂದು ಅವಳು ಆ ಹಾರವನ್ನು ಧರಿಸಿ ಬಂದಾಗ ನಾನು, ‘ಹೋಗಲಿ ರಮ್ಯ, ಇದನ್ನು ಕರಗಿಸಿ ಬೇರೆಯಾದರೂ ಮಾಡಿಸಿಕೋ. ಯಾರಾದರೂ ಎಲ್ಲಾದರೂ ಇದನ್ನು ನೋಡಿ ತಮ್ಮದೆಂದರೆ ಏನು ಮಾಡ್ತೀಯ?’ ಎಂದೆ. ಅದಕ್ಕವಳು ‘ಇದನ್ನು ಕರಗಿಸುವುದಾ? ಛಾನ್ಸೆ ಇಲ್ಲ. ನಾನಿದನ್ನು ಎಷ್ಟು ಇಷ್ಟಪಟ್ಟು ಮಾಡಿಸಿಕೊಂಡೆ ಗೊತ್ತಾ?’ ಎಂದು ಹೇಳಿ ನಾಲಿಗೆ ಕಚ್ಚಿಕೊಂಡಳು. ನಾನು ಅವಾಕ್ಕಾಗಿ ‘ಏನಂದೆ?’ ಅಂದೆ. ‘ಇಲ್ಲ ನನ್ನ ಫ್ರೆಂಡ್ಸ್‌ಗೆಲ್ಲ ಇದನ್ನು ಗಂಜಾಂದು,



‘ಸಂಜೆ ಐದೂವರೆಗೆ ಫೋನ್ ಬಂತು. ‘ಸರ್... ಈ ಫೋನಿನ ಮೇಡಮ್‌ಗೆ ಆ್ಯಕ್ಸಿಡೆಂಟಾಗಿದೆ. ಸ್ಪಾಟ್‌ಡೆತ್ತಾಗಿದೆ. ಅವ್ರ ಫೋನ್ ತಗೊಂಡು ಕಾಲ್‌ಲಾಗ್ ನೋಡಿ ಫೋನ್ ಮಾಡಿದೆ’ ಅಂದರು. ಎದೆತಲ್ಲಣಿಸಿ ತಲೆಯೊಳಗೆ ಧಿಮಿ–ಧಿಮಿ.